JUNE 05, 2024

ALL INDIA RADIO - DHARWAD

PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಜನತಾ ಜನಾರ್ಧನರು, ಸತತ ಮೂರನೇ ಬಾರಿಗೆ, ಎನ್.ಡಿ.ಎ. ಒಕ್ಕೂಟದ ಮೇಲೆ ನಂಬಿಕೆ ಇರಿಸಿದ್ದಾರೆ – ಪ್ರಧಾನಮಂತ್ರಿ, ನರೇಂದ್ರ ಮೋದಿ.
- ಜನರ ಕಲ್ಯಾಣಕ್ಕಾಗಿ ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟ ಘೋಷಿಸಿದ, ನ್ಯಾಯದ ಪರ, ಜನರ ಒಲವು – ಎ.ಐ.ಸಿ.ಸಿ. ಅಧ್ಯಕ್ಷ, ಮಲ್ಲಿಕಾರ್ಜುನ ಖರ್ಗೆ.
- ಲೋಕಸಭೆ ಚುನಾವಣೆ ಫಲಿತಾಂಶ; ಮತದಾರರ ತೀರ್ಪಿಗೆ ತಲೆ ಬಾಗುತ್ತೇವೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ‘ನಮ್ಮ ಭೂಮಿ, ನಮ್ಮ ಭವಿಷ್ಯ, ನಾವು ಪುನರುತ್ಥಾನದ ಪೀಳಿಗೆ’ ಎಂಬ, ಧ್ಯೇಯದೊಂದಿಗೆ, ಇಂದು ಪರಿಸರ ವಿಶ್ವ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯದ 28 ಲೋಕಸಭಾ ಮತಕ್ಷೇತ್ರಗಳಲ್ಲಿ, ಬಿ.ಜೆ.ಪಿ–ಜೆ.ಡಿ.ಎಸ್, ಎನ್.ಡಿ.ಎ ಮೈತ್ರಿಕೂಟದ ಅಭ್ಯರ್ಥಿಗಳು, 19 ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದಾರೆ. ಬಿ.ಜೆ.ಪಿ. ಮೈತ್ರಿ ಪಕ್ಷ ಜೆ.ಡಿ.ಎಸ್ 2 ಕ್ಷೇತ್ರಗಳಲ್ಲಿ ಜಯ ಸಾಧಿಸಿ, 1 ಕ್ಷೇತ್ರದಲ್ಲಿ ಸೋಲು ಅನುಭವಿಸಿದೆ. ಆಡಳಿತಾರೂಢ ಕಾಂಗ್ರೆಸ್ ಪಕ್ಷ 9 ಕ್ಷೇತ್ರಗಳಲ್ಲಿ ಜಯ ದಾಖಲಿಸಿದೆ.

<><><>

ಗೆಲುವು ಸಾಧಿಸಿರುವ ಕ್ಷೇತ್ರಗಳಲ್ಲಿ ಹಾಗೂ ಪಕ್ಷಗಳ ಕಚೇರಿಗಳಲ್ಲಿ, ಆಯಾ ಪಕ್ಷಗಳ ಕಾರ್ಯಕರ್ತರು, ಮುಖಂಡರೊಂದಿಗೆ ಸಿಹಿ ಹಂಚಿ, ಪಟಾಕಿ ಸಿಡಿಸಿ, ಸಂಭ್ರಮಾಚರಣೆ ಮಾಡಿದರು.

<><><>

ಜನತಾ ಜನಾರ್ಧನರು, ಸತತ ಮೂರನೇ ಬಾರಿಗೆ, ಎನ್.ಡಿ.ಎ. ಮೇಲೆ ನಂಬಿಕೆ ಇಟ್ಟಿದ್ದಾರೆ! ಇದು ಭಾರತದ ಇತಿಹಾಸದಲ್ಲಿ ಒಂದು ಐತಿಹಾಸಿಕ ಸಾಧನೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ. ತಮ್ಮ ಎಲ್ಲ ಕಾರ್ಯಕರ್ತರ ಶ್ರಮಕ್ಕೆ ನಮಸ್ಕರಿಸುವುದಾಗಿ, ಅವರ ಅಸಾಧಾರಣ ಪ್ರಯತ್ನಗಳಿಗೆ ಪದಗಳು, ತಕ್ಕ ನ್ಯಾಯ ಸಲ್ಲಿಸಲಾರವು ಎಂದಿದ್ದಾರೆ. ಜನರ ಆಶೋತ್ತರಗಳನ್ನು ಈಡೇರಿಸಲು, ಕಳೆದ ದಶಕದಲ್ಲಿ ಮಾಡಿದ ಉತ್ತಮ ಕೆಲಸವನ್ನು ತಾವು ಮುಂದುವರಿಸುವುದಾಗಿ, ಪ್ರಧಾನಮಂತ್ರಿ ಭರವಸೆ ನೀಡಿದ್ದಾರೆ.

<><><>

ಹೊಸ ದಿಲ್ಲಿಯಲ್ಲಿ ಇಂದು ಕೇಂದ್ರ ಮಂತ್ರಿಮಂಡಲದ ಸಭೆ ನಡೆಯಲಿದೆ ಎಂದು, ಕೇಂದ್ರ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪ್ರಕಟಿಸಿದ್ದಾರೆ. ತನ್ನಿಮಿತ್ತ ತಾವು, ಇಂದು ದಿಲ್ಲಿಗೆ ಪ್ರಯಾಣ ಬೆಳೆಸಲಿದ್ದು, ಹಿಂತಿರುಗಿದ ಬಳಿಕ ಕ್ಷೇತ್ರದ ಜನರನ್ನು ಭೇಟಿ ಮಾಡಿ, ಸಂಭ್ರಮದಲ್ಲಿ ಭಾಗಿಯಾಗುವುದಾಗಿ, ಸಚಿವ ಜೋಶಿ ತಿಳಿಸಿದ್ದಾರೆ.

<><><>

ಜನರ ಕಲ್ಯಾಣಕ್ಕಾಗಿ, ಕಾಂಗ್ರೆಸ್ ಪಕ್ಷ, ಪಂಚ ನ್ಯಾಯ ಹಾಗೂ 25 ಖಾತ್ರಿಗಳನ್ನು ಲೋಕಸಭೆ ಚುನಾವಣೆಗೂ ಮುನ್ನ, ಪ್ರಣಾಳಿಕೆಯಾಗಿ ಪ್ರಕಟಿಸಿತ್ತು. ಆದರೆ, ಬಿ.ಜೆ.ಪಿ. ನಾಯಕರು, ಗ್ಯಾರಂಟಿಗಳ ಬಗ್ಗೆ ಟೀಕಿಸಿದರು. ದೇಶದ ಜನತೆ ಮಾತ್ರ ಕಾಂಗ್ರೆಸ್ ಪರ ಒಲವು ತೋರಿದರು ಎಂದು, ಎ.ಐ.ಸಿ.ಸಿ. ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಲೋಕಸಭೆ ಚುನಾವಣೆ ಫಲಿತಾಂಶದ ಕುರಿತು, ದಿಲ್ಲಿಯ ಕಾಂಗ್ರೆಸ್ ಕಚೇರಿಯಲ್ಲಿ ಅವರು ಸುದ್ದಿಗೋಷ್ಠಿ ನಡೆಸಿದರು.

<><><>

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಾತನಾಡಿ, ಸಂವಿಧಾನ ಉಳಿಸುವುದು ಇಂಡಿಯಾ ಒಕ್ಕೂಟದ ಹೋರಾಟವಾಗಿತ್ತು. ಸಂವಿಧಾನವನ್ನು ಉಳಿಸಲು ಜನರೇ ಹೆಜ್ಜೆ ಇಟ್ಟಿರುವುದು, ಈ ಚುನಾವಣೆ ತೋರಿಸಿಕೊಟ್ಟಿದೆ. ಸರ್ಕಾರ ರಚಿಸುವ ಸಾಧ್ಯತೆ ಕುರಿತು, ಇಂದು ಇಂಡಿಯಾ ಮೈತ್ರಿಕೂಟದ ಪಕ್ಷಗಳೊಂದಿಗೆ ಸಭೆ ನಡೆಸಿ, ಮುಂದಿನ ಹೆಜ್ಜೆ ಇಡಲಾಗುವುದು ಎಂದು, ತಿಳಿಸಿದರು.

<><><>

18ನೇ ಲೋಕಸಭೆ ಚುನಾವಣೆಯಲ್ಲಿ, ಕಾಂಗ್ರೆಸ್ ಪಕ್ಷದ ನಿರೀಕ್ಷೆಗೆ ತಕ್ಕಂತೆ, ರಾಜ್ಯದ 28 ಮತಕ್ಷೇತ್ರಗಳ ಪೈಕಿ, ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗಿಲ್ಲ; ಮತದಾರರ ತೀರ್ಪಿಗೆ, ತಾವು ತಲೆ ಬಾಗುವುದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಚುನಾವಣಾ ಫಲಿತಾಂಶ ಕುರಿತು, ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ತಮ್ಮ ಗೆಲುವಿನ ಲೆಕ್ಕಾಚಾರ ಕೈಗೂಡಲಿಲ್ಲ; ಆದರೆ, ಶೇಕಡವಾರು ಮತ ಗಳಿಕೆಯಲ್ಲಿ, ಕಾಂಗ್ರೆಸ್ ಪಕ್ಷ, ಕಳೆದ ಬಾರಿಯ ಲೋಕಸಭಾ ಚುನಾವಣೆಗಿಂತ ಈ ಬಾರಿ ಪ್ರಗತಿ ಸಾಧಿಸಿದೆ ಎಂದರು. ರಾಜ್ಯದ 9 ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಅವರೊಂದಿಗೆ ಚುನಾವಣೆಯಲ್ಲಿ ಗೆದ್ದಿರುವ, ಎಲ್ಲ ಪಕ್ಷಗಳ ಅಭ್ಯರ್ಥಿಗಳಿಗೂ ತಾವು ಅಭಿನಂದಿಸುವುದಾಗಿ ತಿಳಿಸಿದರು.

<><><>

ರಾಜ್ಯ ಹಾಗೂ ದೇಶದಲ್ಲಿನ ಜನರ ತೀರ್ಪನ್ನು, ಗೌರವಿಸುತ್ತೇವೆ. ಅಧಿಕಾರದ ರಾಜಕೀಯಕ್ಕಿಂತ ವಿಶ್ವಾಸದ ರಾಜಕೀಯ ಗೆದ್ದಂತಾಗಿದೆ. ದೇಶದಲ್ಲಿ ಭಾವನೆ ಸೋತಿದ್ದು, ಬದುಕು ಗೆದ್ದಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

<><><>

ರಾಜ್ಯದಲ್ಲಿ ಜೆ.ಡಿ.ಎಸ್ ಮತ್ತು ಬಿ.ಜೆ.ಪಿ ಅಭ್ಯರ್ಥಿಗಳು, ಅತ್ಯುತ್ತಮ ರೀತಿಯಲ್ಲಿ ಗೆಲುವು ಸಾಧಿಸಿದ್ದಾರೆ ಎಂದು ಜೆ.ಡಿ.ಎಸ್. ವರಿಷ್ಠ, ಮಂಡ್ಯ ಲೋಕಸಭಾ ಕ್ಷೇತ್ರದ ವಿಜೇತ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಲೋಕಸಭಾ ಚುನಾವಣಾ ಫಲಿತಾಂಶ, ಬಿ.ಜೆ.ಪಿ.–ಜೆ.ಡಿ.ಎಸ್. ಮೈತ್ರಿಗೆ ಒಲಿದ ಗೆಲುವು. ದುರಾಡಳಿತದ ಕಾರಣಕ್ಕೆ ಕಾಂಗ್ರೆಸ್‌ನ ಸೋಲು ಎಂದು, ವಿಶ್ಲೇಷಿಸಿದರು.

<><><>

18ನೇ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ, ಬಿ.ಜೆ.ಪಿ. ನೇತೃತ್ವದ ಎನ್.ಡಿ.ಎ. ಮೈತ್ರಿಕೂಟ, 292 ಕ್ಷೇತ್ರಗಳಲ್ಲಿ ಜಯ ಸಾಧಿಸಿದೆ. ಕೇಂದ್ರದಲ್ಲಿ ಸರ್ಕಾರ ರಚಿಸಲು ಅಗತ್ಯವಿರುವ, ಸರಳ ಬಹುಮತ ಗಳಿಸಿ, ರಾಷ್ಟ್ರಪತಿಯವರಿಗೆ, ಮತ್ತೊಮ್ಮೆ ಸರ್ಕಾರ ರಚಿಸುವ ಹಕ್ಕು ಮಂಡಿಸಲಿದೆ. ಪ್ರತಿಪಕ್ಷಗಳ ಇಂಡಿಯಾ ಒಕ್ಕೂಟ, 233 ಕ್ಷೇತ್ರಗಳಲ್ಲಿ ವಿಜಯ ಪತಾಕೆ ಹಾರಿಸಿದೆ.

<><><>

ಎನ್.ಡಿ.ಎ ಒಕ್ಕೂಟದಲ್ಲಿ, ಬಿ.ಜೆ.ಪಿ. 240 ಲೋಕಸಭಾ ಕ್ಷೇತ್ರಗಳಲ್ಲಿ ಜಯ ಸಾಧಿಸಿದೆ. ಮೈತ್ರಿಕೂಟದಲ್ಲಿ ಅತಿ ಹೆಚ್ಚು ಸ್ಥಾನ ಪಡೆದಿರುವ ಪಕ್ಷವಾಗಿ, ಬಿ.ಜೆ.ಪಿ. ಹೊರಹೊಮ್ಮಿದೆ. ವಿಪಕ್ಷ ಇಂಡಿಯಾ ಒಕ್ಕೂಟದಲ್ಲಿ, ಕಾಂಗ್ರೆಸ್ 99 ಸ್ಥಾನಗಳನ್ನು ಗೆದ್ದಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ, ಆನಂದಸ್ವಾಮಿ ಗಡ್ಡದೇವರಮಠ ಅವರನ್ನು ಪರಾಭವಗೊಳಿಸಿ, 43 ಸಾವಿರದ 513 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ನಮ್ಮ ಹಾವೇರಿ ಪ್ರತಿನಿಧಿಯಿಂದ, ಹೆಚ್ಚಿನ ಮಾಹಿತಿ..

<><><>

ಹಾವೇರಿ ಪ್ರತಿನಿಧಿ ಮಂಜುನಾಥ ಗುಡಿಸಾಗರ ಧ್ವನಿ 40 ಸೆಕೆಂದುಗಳು

<><><>

ಪರಿಶಿಷ್ಟ ಪಂಗಡ ಅಭ್ಯರ್ಥಿಗೆ ಮೀಸಲಾದ, ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ, ಸಂಡೂರ ಕ್ಷೇತ್ರದ ಶಾಸಕ ಇ. ತುಕಾರಾಂ ಜಯ ಸಾಧಿಸಿದ್ದಾರೆ. ನಮ್ಮ ಬಳ್ಳಾರಿ ಪ್ರತಿನಿಧಿಯಿಂದ, ಹೆಚ್ಚಿನ ಮಾಹಿತಿ..

<><><>

ಬಳ್ಳಾರಿ ಪ್ರತಿನಿಧಿ ಎನ್. ವೀರಭದ್ರಗೌಡ ಧ್ವನಿ 45 ಸೆಕೆಂದುಗಳು

<><><>

ಯಾದಗಿರಿ ಜಿಲ್ಲೆ, ಸುರಪುರ ಮೀಸಲು ಅಭ್ಯರ್ಥಿ, ವಿಧಾನಸಭಾ ಕ್ಷೇತ್ರದ, ಉಪಚುನಾವಣೆಯಲ್ಲಿ, ಕಾಂಗ್ರೆಸ್ ಅಭ್ಯರ್ಥಿ ರಾಜಾ ವೇಣುಗೋಪಾಲ್ ನಾಯಕ್, 1 ಲಕ್ಷ 14 ಸಾವಿರದ 8 ನೂರಾ 86 ಮತಗಳನ್ನು ಪಡೆದು, ಜಯ ಗಳಿಸಿದ್ದಾರೆ. ಸಮೀಪದ ಪ್ರತಿಸ್ಪರ್ಧಿ, ಬಿಜೆಪಿ ಅಭ್ಯರ್ಥಿ ರಾಜೂಗೌಡ ನರಸಿಂಹ ನಾಯಕ್ ಅವರನ್ನು, 18 ಸಾವಿರದ 3 ನೂರಾ 20 ಮತಗಳ ಅಂತರದಿಂದ ಪರಾಭವಗೊಳಿಸಿದ್ದಾರೆ. 848 ನೋಟಾ ಮತಗಳು ಚಲಾವಣೆಯಾಗಿವೆ.

<><><>

ರಾಜ್ಯ ವಿಧಾನಸಭೆಯಿಂದ ವಿಧಾನ ಪರಿ ತ್‌ಗೆ ನಡೆಯಲಿರುವ ದ್ವೈ ವಾರ್ಷಿಕ ಚುನಾವಣೆಗೆ, 11 ಅಭ್ಯರ್ಥಿಗಳು ಸಲ್ಲಿಸಿದ ಎಲ್ಲ ನಾಮಪತ್ರಗಳು ಕ್ರಮಬದ್ಧವಾಗಿವೆ ಎಂದು, ಚುನಾವಣಾಧಿಕಾರಿ ತಿಳಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ಏಳು, ಬಿ.ಜೆ.ಪಿ. ಪಕ್ಷದ ಮೂವರು ಹಾಗೂ ಜೆ.ಡಿ.ಎಸ್. ನಿಂದ ಓರ್ವ ಅಭ್ಯರ್ಥಿ ಸೇರಿದಂತೆ, ಎಲ್ಲ 11 ಅಭ್ಯರ್ಥಿಗಳು ಮೇಲ್ಮನೆಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

<><><>

ಕಾಂಗ್ರೆಸ್‌ನಿಂದ ಐವಾನ್ ಡಿಸೋಜಾ, ಕೆ. ಗೋವಿಂದರಾಜ್, ಜಗದೇವ ಗುತ್ತೇದಾರ, ಬಿಲ್ಕೀಸ್ ಬಾನು, ಎನ್.ಎಸ್. ಬೋಸರಾಜು, ಡಾಕ್ಟರ್ ಯತೀಂದ್ರ ಸಿದ್ದರಾಮಯ್ಯ, ಕೆ. ವಸಂತಕುಮಾರ್..

<><><>

ಬಿಜೆಪಿಯ ಮುಳೆ ಮಾರುತಿ ರಾವ, ಸಿ.ಟಿ. ರವಿ, ಎನ್. ರವಿಕುಮಾರ್ ಹಾಗೂ ಜೆ.ಡಿ.ಎಸ್.ನ ಟಿ.ಎನ್. ಜವರಾಯಿಗೌಡ ಅವರು, ಆಯ್ಕೆಯಾಗಿದ್ದಾಗಿ ಚುನಾವಣಾಧಿಕಾರಿ ತಿಳಿಸಿದ್ದಾರೆ.

<><><>

'ನಮ್ಮ ಭೂಮಿ, ನಮ್ಮ ಭವಿಷ್ಯ, ನಾವು ಪುನರುತ್ಥಾನದ ಪೀಳಿಗೆ' ಎಂಬ, ಧ್ಯೇಯದೊಂದಿಗೆ, ಭೂಮಿಯ ಪುನರುಜ್ಜೀವನ, ಮರಭೂಮಿ ಸ್ಥಿರೀಕರಣ ಹಾಗೂ ಬರ ನಿರೋಧಕತೆಗೆ ಒತ್ತು ನೀಡುವ ಉದ್ದೇಶದಿಂದ, ಇಂದು ಬುಧವಾರ, ಜೂನ್ 5 ರಂದು, ಪರಿಸರ ವಿಶ್ವ ದಿನ ಆಚರಿಸಲಾಗುತ್ತಿದೆ.

<><><>

1972 ರಲ್ಲಿ, ವಿಶ್ವ ಸಂಸ್ಥೆಯ ಮಹಾ ಅಧಿವೇಶನದಲ್ಲಿ, ಸ್ಥಳೀಯ ಮಟ್ಟದಲ್ಲಿ ಪರಿಸರ ಸಂರಕ್ಷಣೆಗಾಗಿ, ಈ ದಿನ ಮೀಸಲಿರಿಸಲಾಗಿದೆ.

<><><>

ಸೌದಿ ಅರೇಬಿಯಾ, ಪ್ರಸಕ್ತ ಪರಿಸರ ವಿಶ್ವ ದಿನದ, ಜಾಗತಿಕ ಆಚರಣೆ ಸಂಯೋಜಿಸಲಿದೆ.

<><><>

ಪರಿಸರ ವಿಶ್ವ ದಿನದ ಹಿನ್ನೆಲೆ, ಇಂದು ಬೆಳಗ್ಗೆ 10 ಗಂಟೆಗೆ, ಹುಬ್ಬಳ್ಳಿಯ ನೂತನ ನ್ಯಾಯಾಲಯದ ಆವರಣದಲ್ಲಿ, 1ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ಪರಮೇಶ್ವರ ಪ್ರಸನ್ನ ಬಿ. ಅವರು, ಸಸಿ ನೆಡಲಿದ್ದಾರೆ. ವಕೀಲರ ಸಂಘದ ಅಧ್ಯಕ್ಷ ಎಮ್.ಎಸ್.ಬಾಣದ ಪಾಲ್ಗೊಳ್ಳಲಿದ್ದಾರೆ.

<><><>

ಧಾರವಾಡದ ಶತಮಾನ ಕಂಡ ಕೆಲಗೇರಿ ಕೆರೆಯಲ್ಲಿ, ಇಂದು ಬೆಳಗ್ಗೆ 9.45ಕ್ಕೆ ಪರಿಸರ ವಿಶ್ವ ದಿನದ ಕಾರ್ಯಕ್ರಮ ಆಯೋಜಿತವಾಗಿದೆ. ಪ್ರಧಾನ ಜಿಲ್ಲಾ ನ್ಯಾಯಾಧೀಶರಾದ ಕೆ.ಜಿ. ಶಾಂತಿ ಸಸಿ ನೆಟ್ಟು, ಕಾರ್ಯಕ್ರಮ ಉದ್ಘಾಟಿಸುವರು.

<><><>

ಮುತ್ಸದ್ದಿ ಅನಂತಕುಮಾರ ಅವರು, 2016 ರಲ್ಲಿ ಚಾಲನೆ ನೀಡಿದ, 'ಸಸ್ಯಾ ಗ್ರಹ' ಯೋಜನೆ, 440ನೇ ವಾರದಲ್ಲಿ ಮುನ್ನಡೆದಿದೆ ಎಂದು ಅದಮ್ಯ ಚೇತನದ ತೇಜಸ್ವಿನಿ ಅನಂತಕುಮಾರ ತಿಳಿಸಿದ್ದಾರೆ.

<><><>

NTA – National Testing Agency, ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗೆ ನಡೆಸುವ, ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ – NEET (UG) 2024 ರ, ಫಲಿತಾಂಶ ಘೋಷಿಸಿದೆ. ರಾಜ್ಯದ ಮೂವರು ವಿದ್ಯಾರ್ಥಿಗಳು ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ. NEET (UG) 2024ರ ಪರೀಕ್ಷೆಯಲ್ಲಿ, ಒಟ್ಟು 13 ಲಕ್ಷ 16 ಸಾವಿರದ 268 ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಜನತಾ ಜನಾರ್ದನರು, ಸತತ ಮೂರನೇ ಬಾರಿಗೆ, ಎನ್.ಡಿ.ಎ. ಒಕ್ಕೂಟದ ಮೇಲೆ ನಂಬಿಕೆ ಇರಿಸಿದ್ದಾರೆ – ಪ್ರಧಾನಮಂತ್ರಿ, ನರೇಂದ್ರ ಮೋದಿ.
- ಜನರ ಕಲ್ಯಾಣಕ್ಕಾಗಿ ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟ ಘೋಷಿಸಿದ, ನ್ಯಾಯದ ಪರ, ಜನರ ಒಲವು – ಎ.ಐ.ಸಿ.ಸಿ. ಅಧ್ಯಕ್ಷ, ಮಲ್ಲಿಕಾರ್ಜುನ ಖರ್ಗೆ.
- ಲೋಕಸಭೆ ಚುನಾವಣೆ ಫಲಿತಾಂಶ; ಮತದಾರರ ತೀರ್ಪಿಗೆ ತಲೆ ಬಾಗುತ್ತೇವೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ‘ನಮ್ಮ ಭೂಮಿ, ನಮ್ಮ ಭವಿಷ್ಯ, ನಾವು ಪುನರುತ್ಥಾನದ ಪೀಳಿಗೆ’ ಎಂಬ, ಧ್ಯೇಯದೊಂದಿಗೆ, ಇಂದು ಪರಿಸರ ವಿಶ್ವ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ